*ಸಂಪಾದಕೀಯ*

# ರಾಮಕೃಷ್ಣಾವತಾರದ ಮೂರು ಮುಖಗಳು.

**ನಾ**ವು ಶ್ರೀರಾಮಕೃಷ್ಣರನ್ನು ಅವತಾರ ಪುರುಷರೆಂದು ಹೇಳುವಾಗ ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರನ್ನೂ ಆ ಅವತಾರದ ಅಂಗವಾಗಿ ಸ್ವೀಕರಿಸಬೇಕಾಗುತ್ತದೆ. ಈ ಮೂವರೂ ಒಂದೇ ಅವತಾರದ ಮೂರು ಮುಖಗಳು ಎಂದು ನಾವು ಪರಿಗಣಿಸಬಹುದು. ಇವರಿಬ್ಬರನ್ನು ಹೊರತುಪಡಿಸಿದರೆ ರಾಮಕೃಷ್ಣಾವತಾರವು ಅಪೂರ್ಣವಾಗಿಯೇ ಉಳಿಯುತ್ತದೆ. ಏಕೆಂದರೆ ಶ್ರೀರಾಮಕೃಷ್ಣರು ಸಾಧಿಸದೆ ಬಿಟ್ಟುಹೋದ ಅಂಶಗಳನ್ನು ಇವರಿಬ್ಬರು ಪೂರ್ಣಗೊಳಿಸಿದರು. ನಾವು ಸಾಮಾನ್ಯವಾಗಿ ಶ್ರೀರಾಮಕೃಷ್ಣರು ಹೇಳಿರುವುದು ಮತ್ತು ಮಾಡಿರುವುದನ್ನೇ ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು ಮುಂದುವರಿಸಿದರು ಎಂದು ನಮ್ಮ ಎಲ್ಲ ಕಲ್ಪನಾಶಕ್ತಿಯನ್ನೂ ವಿಚಾರಶಕ್ತಿಯನ್ನೂ ಉಪಯೋಗಿಸಿ ಪ್ರಮಾಣೀಕರಿಸಲು ಪ್ರಯತ್ನಿಸುತ್ತೇವೆ. ವಿಶೇಷವಾಗಿ ಶ್ರೀರಾಮಕೃಷ್ಣರು ಮತ್ತು ವಿವೇಕಾನಂದರ ಕಾರ್ಯವೈಖರಿ ಮತ್ತು ಉಪದೇಶಗಳ ನಡುವೆ ಕಂಡುಬರುವ ವೈವಿಧ್ಯಗಳನ್ನು ಒಂದಾಗಿಸಲು ಹವಣಿಸುತ್ತೇವೆ. ಈ ವಿಷಯದಲ್ಲಿ ನಾವು ಅಷ್ಟೊಂದು ತಲೆ ಕೆಡಿಸಿಕೊಳ್ಳುವ ಆವಶ್ಯಕತೆಯಿಲ್ಲ. ಈ ಮೂವರು ಮಹಾಪುರುಷರು ಹೇಳಿರುವುದು ಮತ್ತು ಮಾಡಿರುವುದು ಒಂದೇ ಆಗಿರಬೇಕಾಗಿಲ್ಲ. ಈ ಮೂವರ ಜೀವನವಿಧಾನದಲ್ಲಿ, ಕಾರ್ಯಗಳಲ್ಲಿ, ಅವರು ನೀಡಿದ ಉಪದೇಶಗಳಲ್ಲಿ ಅನೇಕ ವ್ಯತ್ಯಾಸಗಳು ಕಂಡುಬರುತ್ತವೆ. ಆದರೆ ಅವೆಲ್ಲವೂ ಪರಸ್ಪರ ಪೂರಕ, ಒಂದು ಮತ್ತೊಂದರ ಪೂರ್ತಿ. ಈ ಮೂವರೂ ಧರ್ಮದ ವಿವಿಧ ಮುಖಗಳನ್ನು ಪ್ರತಿನಿಧಿಸುತ್ತಾರೆ ಎನ್ನಬಹುದು. ಧರ್ಮವನ್ನು ಐತಿಹಾಸಿಕ, ಸಾಮಾಜಿಕ ಮುಂತಾದ ದೃಷ್ಟಿಕೋನಗಳಿಂದ ನೋಡಿದಾಗ ಈ ಮೂವರು ಇವುಗಳ ವಿವಿಧ ಮಜಲುಗಳನ್ನು ಪ್ರತಿಬಿಂಬಿಸುತ್ತಿರುವುದಾಗಿ ಕಂಡುಬರುತ್ತದೆ. ಮುಂದೆ ಅದರ ವಿಶ್ಲೇಷಣೆಯನ್ನು ಮಾಡಲಾಗಿದೆ.

> **ಶ್ರೀರಾಮಕೃಷ್ಣರು ಮೂವತ್ತು ಕೋಟಿ ಜನರ ಎರಡು ಸಾವಿರ ವರ್ಷಗಳ ಆಧ್ಯಾತ್ಮಿಕ ಜೀವನದ ಪರಿಪೂರ್ಣರೂಪ.**
>
> — ರೋಮಾ ರೋಲಾ (Romain Rolland)

## ಧರ್ಮದ ಐತಿಹಾಸಿಕ ಮುಖ:

ನಾವು ಪ್ರತಿಯೊಂದನ್ನೂ ಕಾಲದೃಷ್ಟಿಯಿಂದ ನೋಡುತ್ತೇವೆ. ಪ್ರತಿಯೊಂದಕ್ಕೂ ಭೂತ, ವರ್ತಮಾನ ಮತ್ತು ಭವಿಷ್ಯಗಳಿರುತ್ತವೆ. ಧರ್ಮವನ್ನೂ ಇದೇ ದೃಷ್ಟಿಯಿಂದ ಅಧ್ಯಯನ ಮಾಡುವುದು ನಮಗೆ ರೂಢಿಯಾಗಿದೆ. ನಾವು ರಾಮಕೃಷ್ಣಾವತಾರವನ್ನು ಸೂಕ್ಷ್ಮವಾಗಿ ಪರಿಗಣಿಸಿದಾಗ ಶ್ರೀರಾಮಕೃಷ್ಣ, ಶ್ರೀಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರು ಕ್ರಮವಾಗಿ ಧರ್ಮದ ಭೂತ, ವರ್ತಮಾನ ಮತ್ತು ಭವಿಷ್ಯದ ರೂಪಗಳನ್ನು ಪ್ರತಿನಿಧಿಸುತ್ತಾರೆ ಎನ್ನಬಹುದು.

ಶ್ರೀರಾಮಕೃಷ್ಣರು ಭೂತಕಾಲದ ಧರ್ಮವನ್ನು ಪ್ರತಿನಿಧಿಸುತ್ತಾರೆ. ಶ್ರೀರಾಮಕೃಷ್ಣರನ್ನು ಕುರಿತಂತೆ ಸ್ವಾಮಿ ವಿವೇಕಾನಂದರ ಒಂದು ಪ್ರಮುಖ ಹೇಳಿಕೆಯನ್ನು ನಾವಿಲ್ಲಿ ನೆನೆಪಿಸಿಕೊಳ್ಳಬಹುದು: “ಶ್ರೀರಾಮಕೃಷ್ಣರ ಜೀವನಚರಿತ್ರೆ ಒಂದು ಜಾಜ್ವಲ್ಯಮಾನವಾದ ದೀಪದಂತಿದೆ. ಇದರ ಬೆಳಕಿನಲ್ಲಿ ಹಿಂದೂಧರ್ಮದ ಉದ್ದೇಶವನ್ನು ತಿಳಿದುಕೊಳ್ಳಬಹುದು. ಶಾಸ್ತ್ರದಲ್ಲಿ ಉಕ್ತವಾಗಿರುವ ಸಕಲ ವಿದ್ಯೆಗೂ ಅವರು ಮೈವೆತ್ತ ನಿದರ್ಶನ. ನಮ್ಮ ಋಷಿಗಳು ಮತ್ತು ಅವತಾರ ಪುರುಷರು ಯಾವುದನ್ನು ಜಗತ್ತಿಗೆ ಬೋಧಿಸಬೇಕೆಂದಿದ್ದರೊ ಅದನ್ನು ತಮ್ಮ ಜೀವನದಲ್ಲಿ ಇವರು ತೋರಿಸಿರುವರು. ಶಾಸ್ತ್ರಗಳು ಕೇವಲ ಸಿದ್ಧಾಂತಗಳು, ಅವರಾದರೊ ಸಿದ್ಧರು! ಈ ಮಹಾನುಭಾವರು, ತಮ್ಮ ಜೀವನ ಐವತ್ತೊಂದು ವರ್ಷಗಳಲ್ಲಿ ಭಾರತೀಯರ ಐದು ಸಾವಿರ ವರ್ಷಗಳ ಆಧ್ಯಾತ್ಮಿಕ ಜೀವನವನ್ನು ಬಾಳಿದರು. ಬರುವ ಜನಾಂಗಕ್ಕೆ ಒಂದು ಮೇಲ್ಪಂಕ್ತಿಯಾಗಿ ಆದರ್ಶಪುರುಷರ ಸ್ಥಾನಕ್ಕೆ ಏರಿದರು” (ಕೃತಿಶ್ರೇಣಿ, 4 : 210).

ಪುರಾತನ ಶಾಸ್ತ್ರಗಳಲ್ಲಿ ಉಕ್ತವಾದ ಎಲ್ಲ ಆಧ್ಯಾತ್ಮಿಕ ಸಾಧನೆಗಳನ್ನೂ ಅನುಸರಿಸುವುದರ ಮೂಲಕ ಶ್ರೀರಾಮಕೃಷ್ಣರು ಸನಾತನ ಆಧ್ಯಾತ್ಮಿಕ ಸಂಪ್ರದಾಯದ ಮೂರ್ತರೂಪದಂತಿದ್ದಾರೆ. ಅವರು ಅತ್ಯಂತ ಮಹತ್ವಾಕಾಂಕ್ಷೆಯ ಪರ್ವತಾರೋಹಿ ಇದ್ದಂತೆ. ಅವನು ಒಂದೇ ಮಾರ್ಗದಿಂದ ಪರ್ವತತುದಿಯನ್ನು ತಲುಪುವುದರಲ್ಲಿ ತೃಪ್ತನಾಗದೆ, ಬೇರೆ ಬೇರೆ ಮಾರ್ಗಗಳ ಮೂಲಕವೂ ಪರ್ವತದ ತುದಿಯನ್ನು ತಲುಪಲು ಪ್ರಯತ್ನಿಸುತ್ತಾನೆ. ಹಾಗೆಯೇ ಶ್ರೀರಾಮಕೃಷ್ಣರೂ ಕೂಡ ಅನೇಕ ಮಾರ್ಗಗಳ ಮೂಲಕ ಒಂದೇ ದೈವಸಾಕ್ಷಾತ್ಕಾರವನ್ನು ಪಡೆಯಲು ಪ್ರಯತ್ನಿಸಿದರು. ಇದರ ಮೂಲಕ ಎಲ್ಲ ಮಾರ್ಗಗಳೂ ಯಥಾರ್ಥವಾದವುಗಳೆಂಬುದನ್ನು ಅವರು ತೋರಿಸಿಕೊಟ್ಟರು ಮತ್ತು ಪುರಾತನ ಶಾಸ್ತ್ರಗಳ ಪ್ರಾಮಾಣಿಕತೆಯನ್ನು ದೃಢೀಕರಿಸಿದರು. ನೋಬೆಲ್ ಪ್ರಶಸ್ತಿ ವಿಜೇತ, ಫ್ರೆಂಚ್ ಕಾದಂಬರಿಕಾರ ರೋಮಾ ರೋಲಾ ಹೇಳುತ್ತಾರೆ: “ಶ್ರೀರಾಮಕೃಷ್ಣರು ಮೂವತ್ತು ಕೋಟಿ ಜನರ ಎರಡು ಸಾವಿರ ವರ್ಷಗಳ ಆಧ್ಯಾತ್ಮಿಕ ಜೀವನದ ಪರಿಪೂರ್ಣರೂಪ.”

ಪುರಾತನ ಧರ್ಮವನ್ನು ತಮ್ಮ ಸಾಧನೆ ಮತ್ತು ಅನುಭವಗಳ

ಮೂಲಕ ಪ್ರಮಾಣೀಕರಿಸುತ್ತ ಶ್ರೀರಾಮಕೃಷ್ಣರು ಭವಿಷ್ಯಧರ್ಮಕ್ಕೆ ಒಂದು ಸುಭದ್ರ ತಳಹದಿಯನ್ನು ಹಾಕಿದರು. ಅವರು ಭೂತ ಕಾಲವನ್ನು ಪ್ರತಿನಿಧಿಸುತ್ತಾರೆ ಎಂದ ಮಾತ್ರಕ್ಕೆ ಅವರು ಇಂದು ಅಪ್ರಸ್ತುತ ಎಂದಂತಾಗುವುದಿಲ್ಲ. ಏಕೆಂದರೆ ಅತೀತದ ತಳ ಹದಿಯ ಮೇಲೆ ವರ್ತಮಾನ ನಿಂತಿರುವುದು. ಮರಕ್ಕೆ ಬೇರು ಅತಿ ಮುಖ್ಯವಾಗಿರುವಂತೆ ಇಂದಿನ ಮತ್ತು ಮುಂದಿನ ಧರ್ಮಕ್ಕೆ ಶ್ರೀರಾಮಕೃಷ್ಣರು ಅತ್ಯಂತ ಮುಖ್ಯ.

ಶ್ರೀಮಾತೆ ಶಾರದಾದೇವಿಯವರನ್ನು ವರ್ತಮಾನ ಧರ್ಮದ ಪ್ರತಿನಿಧಿ ಎಂದು ಪರಿಗಣಿಸಬಹುದು. ಶ್ರೀಮಾತೆಯವರ ಶ್ರೇಷ್ಠತೆ ಮತ್ತು ಜೀವನವೈಶಿಷ್ಟ್ಯದ ಬಗ್ಗೆ ಸೋದರಿ ನಿವೇದಿತಾ ಹೇಳಿರುವ ಈ ಕೆಳಗಿನ ಮಾತು ತುಂಬ ವಿಶಿಷ್ಟವಾದುದು: "ಶ್ರೀಮಾತೆಯವರು ಭಾರತೀಯ ಸ್ತ್ರೀತ್ವದ ಕುರಿತಾಗಿ ಶ್ರೀರಾಮಕೃಷ್ಣರ ಕೊನೆಯ ಮಾತು ಎಂದು ನನಗನಿಸುತ್ತದೆ. ಆದರೆ ಅವರು (ಶ್ರೀಮಾತೆಯವರು) ಹಳೆಯ ವ್ಯವಸ್ಥೆಯ ಕೊನೆಯ ಘಟ್ಟವೋ ಅಥವಾ ಹೊಸದರ ಪ್ರಾರಂಭವೋ?" ಶ್ರೀಮಾತೆಯವರು ನಶಿಸಿಹೋಗುತ್ತಿರುವ ಹಳೆಯ ವ್ಯವಸ್ಥೆ ಮತ್ತು ಚಿಗುರೊಡೆಯುತ್ತಿರುವ ಹೊಸ ವ್ಯವಸ್ಥೆ—ಇವುಗಳ ನಡುವೆ ನಿಂತಿದ್ದಾರೆ ಎಂಬುದನ್ನು ನಿವೇದಿತಾ ತಮ್ಮ ಮೇಲಿನ ಹೇಳಿಕೆಯ ಮೂಲಕ ಸೂಚಿಸಿದ್ದಾರೆ. ಅಂದರೆ ಅವರು ವರ್ತಮಾನವನ್ನು ಪ್ರತಿನಿಧಿಸುತ್ತಾರೆ—ಅತೀತ ಅನಾಗತಗಳ ಸಂಧಿಕಾಲವನ್ನು ಪ್ರತಿನಿಧಿಸುತ್ತಾರೆ.

ಶ್ರೀಮಾತೆಯವರ ಜೀವನವನ್ನು ನಾವು ಅಧ್ಯಯನ ಮಾಡಿದಾಗ ನಮಗೆ ತಿಳಿದುಬರುವುದೇನೆಂದರೆ, ಅವರು ಶ್ರೀರಾಮಕೃಷ್ಣರಷ್ಟು ಸಂಪ್ರದಾಯಸ್ಥರಾಗಿರಲಿಲ್ಲ. ಅವರು ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಿಂದ ಬಂದವರಾದರೂ ಜಾತಿನಿಯಮಗಳನ್ನು ಅಷ್ಟು ಕಟ್ಟುನಿಟ್ಟಾಗಿ ಪಾಲಿಸುತ್ತಿರಲಿಲ್ಲ—ಅವಶ್ಯವಿದ್ದಾಗಲೆಲ್ಲ ಅವರು ಬದಲಾವಣೆಗೆ ಸಿದ್ಧರಿದ್ದರು. ತಮ್ಮ ಪ್ರೀತಿಯ ಅಭಿವ್ಯಕ್ತಿಗೆ ಸಾಂಪ್ರದಾಯಿಕತೆ ಅಡ್ಡಿಬಂದರೆ ಅದನ್ನು ಉಲ್ಲಂಘಿಸಲು ಅವರು ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ಅಮ್‌ಜಾದ್ ಎಂಬ ಮುಸ್ಲಿಮನನ್ನೂ ಪಾಶ್ಚಾತ್ಯ ಮಹಿಳೆಯರನ್ನೂ ಅವರು ನಡೆಸಿಕೊಂಡ ರೀತಿ ಸ್ವಾಮಿ ವಿವೇಕಾನಂದರನ್ನೇ ಆಶ್ಚರ್ಯಗೊಳಿಸಿತು. ಅತ್ಯಂತ ಮಡಿವಂತ ಮಹಿಳೆಯಾಗಿಯೂ ಆಧುನಿಕ ಶಿಕ್ಷಣದ ಕೊರತೆ ಇದ್ದಾಗ್ಯೂ ಅವರು ಜಾತೀಯ ಕಟ್ಟುಪಾಡುಗಳನ್ನು ಮೀರಿ ವರ್ತಿಸಿದುದು ಅವರ ಆಂತರಿಕ ಗಟ್ಟಿತನವನ್ನೂ ಮಾನಸಿಕ ವೈಶಾಲ್ಯವನ್ನೂ ಸೂಚಿಸುತ್ತದೆ. ಈಗ ನಮಗೆ ಅವರ ವರ್ತನೆ ಅಷ್ಟೊಂದು ವಿಶಿಷ್ಟವಾಗಿ ಕಾಣದಿರಬಹುದು. ಆದರೆ ಜಾತೀಯತೆಯಿಂದ ಜಡ್ಡುಕಟ್ಟಿಹೋಗಿದ್ದ ನೂರುವರ್ಷಗಳ ಹಿಂದಿನ ಸಾಮಾಜಿಕ ಸ್ಥಿತಿಯನ್ನು ನಾವು ಕಲ್ಪಿಸಿಕೊಂಡಾಗ ಶ್ರೀಮಾತೆಯವರ ವರ್ತನೆ ದೊಡ್ಡ ಸಾಹಸವೆಂದೇ ಕಂಡುಬರುತ್ತದೆ ಮತ್ತು ಅವರು ಎಷ್ಟರಮಟ್ಟಿಗೆ ಕಾಲವನ್ನು ಮೀರಿ ನಿಂತಿದ್ದರು ಎಂಬುದನ್ನೂ ಸೂಚಿಸುತ್ತದೆ.

ತಾವು ಅನಕ್ಷರಸ್ಥರಾಗಿದ್ದರೂ ಸಾರ್ವಜನಿಕ ಜೀವನದಿಂದ ಬಹುದೂರವಿದ್ದರೂ ತಮ್ಮೆಡೆಗೆ ಬರುತ್ತಿದ್ದ ಯುವತಿಯರನ್ನು ಆಧುನಿಕ ಶಿಕ್ಷಣ ಪಡೆಯಲು ಮತ್ತು ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವರು ಉತ್ತೇಜನ ನೀಡುತ್ತಿದ್ದರು. ಆಧುನಿಕ ಶಿಕ್ಷಣವನ್ನು ಪಡೆದಿದ್ದ ಕೆಲವು ಶ್ರೀರಾಮಕೃಷ್ಣರ ಶಿಷ್ಯರೇ ವಿವೇಕಾನಂದರ ಸೇವಾತತ್ತ್ವವನ್ನು ವಿರೋಧಿಸುತ್ತಿದ್ದರೂ ಶ್ರೀಮಾತೆಯವರು ಮಾತ್ರ ಅತ್ಯಂತ ಸ್ವಾಭಾವಿಕವಾಗಿ ಅದನ್ನು ಒಪ್ಪಿಕೊಂಡು, ಯುವಕರನ್ನು ಅದನ್ನು ಅನುಸರಿಸಲು ಹುರಿದುಂಬಿಸುತ್ತಿದ್ದರು.

**ವರ್ತಮಾನದ ಹೊಸ್ತಿಲಿನಲ್ಲಿ ನಿಂತಿದ್ದ ಶ್ರೀಮಾತೆಯವರ ಕಣ್ಮುಂದೆ ಭೂತ ಭವಿಷ್ಯಗಳೆರಡರ ಒಂದು ಸಮಗ್ರ ಚಿತ್ರ ಇತ್ತು.**

ಶ್ರೀರಾಮಕೃಷ್ಣರ ಸಂದೇಶವನ್ನು ಸಾರುವುದಕ್ಕಾಗಿ ಒಂದು ಸ್ಥಾಯೀ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ತಮ್ಮ ಇಚ್ಛೆಯನ್ನು ಸ್ವಾಮೀಜಿ ವ್ಯಕ್ತಪಡಿಸಿದಾಗ ಶ್ರೀಮಾತೆಯವರೆಂದರು: "ಏನೂ ಚಿಂತಿಸಬೇಡ. ನೀನು ಈಗ ಏನು ಮಾಡುತ್ತಿರುವೆಯೊ ಮತ್ತು ಮುಂದೆ ಏನು ಮಾಡುವೆಯೊ ಅದೆಲ್ಲ ಶಾಶ್ವತವಾಗಿ ಉಳಿಯುವುದು. ನೀನು ಈ ಕಾರ್ಯಸಾಧನೆಗಾಗಿಯೇ ಜನಿಸಿದ್ದೀಯೆ. ನಿನ್ನನ್ನು ಜಗದ್ಗುರುವೆಂದು, ಅಧ್ಯಾತ್ಮಜ್ಞಾನದಾಯಕನೆಂದು ಸಾವಿರಾರು ಜನರು ಪರಿಗಣಿಸುವರು. ಶ್ರೀರಾಮಕೃಷ್ಣರು ಬೇಗನೆ ನಿನ್ನ ಆಸೆಯನ್ನು ಪೂರ್ತಿಗೊಳಿಸುತ್ತಾರೆ ಎಂದು ನಾನು ಭರವಸೆ ನೀಡುತ್ತೇನೆ. ನೀನು ಕೈಗೊಂಡ ಕಾರ್ಯ ಬೇಗನೆ ಕೈಗೂಡುವುದೆಂಬುದನ್ನು ನೀನು ನೋಡುತ್ತೀಯೆ."

ರಾಮಕೃಷ್ಣಾವತಾರದ ಮಹತ್ತ್ವವನ್ನು ಆಧುನಿಕ ಸಾಮಾಜಿಕ ಸಂದರ್ಭಕ್ಕೆ ಅನುಸಾರವಾಗಿ ಅವರು ಎಷ್ಟರಮಟ್ಟಿಗೆ ಅರ್ಥಮಾಡಿಕೊಂಡಿದ್ದರೆಂಬುದು ಈ ಮೇಲಿನ ಮಾತಿನಿಂದ ತಿಳಿದುಬರುತ್ತದೆ. ವರ್ತಮಾನದ ಹೊಸ್ತಿಲಿನಲ್ಲಿ ನಿಂತಿದ್ದ ಅವರ ಕಣ್ಮುಂದೆ ಭೂತ ಭವಿಷ್ಯಗಳೆರಡರ ಒಂದು ಸಮಗ್ರ ಚಿತ್ರ ಇತ್ತು ಎಂಬುದು ಇದರಿಂದ ತಿಳಿದುಬರುತ್ತದೆ.

ಆಧುನಿಕ ತಂತ್ರಜ್ಞಾನದ ಪರಿಣಾಮವಾಗಿ ಇಂದು ಜಗತ್ತು ಕಿರಿದಾಗುತ್ತಿದೆ. ಬೇರೆ ಬೇರೆ ದೇಶಗಳು, ಸಂಸ್ಕೃತಿಗಳು, ಜನಾಂಗಗಳು ಮುಂತಾದವುಗಳು ಹತ್ತಿರ ಹತ್ತಿರ ಬರುತ್ತಿವೆ. ಆದರೆ ಈ ನಿಕಟತೆಯು ಹೆಚ್ಚಿನ ಬಾಂಧವ್ಯಕ್ಕೆ ಕಾರಣವಾಗುವ ಬದಲು ಹೆಚ್ಚಿನ ಗೊಂದಲಗಳಿಗೆ, ಸಂಘರ್ಷಗಳಿಗೆ ಮತ್ತು ಯುದ್ಧಗಳಿಗೆ ಕಾರಣವಾಗುತ್ತಿದೆ. ಇದಕ್ಕೆ ಕಾರಣ, ಹೊರಗಿನ ಬದಲಾವಣೆಗೆ ಅನುಗುಣವಾಗಿ ಆಂತರಿಕ ಮನೋಭಾವದಲ್ಲಿ ಬದಲಾವಣೆ ಉಂಟಾಗಿಲ್ಲ. ಭೌತಿಕ ಸಾರ್ವತ್ರಿಕತೆಯಾಗಿದೆಯೇ ಹೊರತು ಮನೋಭಾವದ ಸಾರ್ವತ್ರಿಕತೆಯಾಗಿಲ್ಲ. ಮತೀಯ, ಜನಾಂಗೀಯ,

ದೇಶೀಯ ಮನೋಭಾವವನ್ನು ಮೀರಿ ನಾವು ಹೊರಬರಬೇಕು. ಅದಿಲ್ಲದೆ ನಮ್ಮ ಸೀಮಿತ ಮನೋಭಾವದೊಂದಿಗೆ ನಾವು ಹತ್ತಿರವಾದಷ್ಟೂ ದ್ವೇಷ ಉಲ್ಬಣಿಸುತ್ತದೆ, ಶತ್ರುತ್ವ ಅಧಿಕವಾಗುತ್ತದೆ ಮತ್ತು ಯುದ್ಧ ಕದನ ಗಲಭೆಗಳು ವೃದ್ಧಿಯಾಗುತ್ತವೆ. ವರ್ತಮಾನದ ಪರಿಸ್ಥಿತಿಯಲ್ಲಿ ಮನೋಭಾವದ ಬದಲಾವಣೆಯ ಆವಶ್ಯಕತೆಯನ್ನು ಶ್ರೀಮಾತೆಯವರು ಅರ್ಥ ಮಾಡಿಕೊಂಡಿದ್ದರು. ಅವರು ಹೇಳುತ್ತಾರೆ: "ಇಡೀ ಜಗತ್ತನ್ನು ನಿನ್ನದಾಗಿಸುವುದನ್ನು ಕಲಿ. ಯಾರೂ ಪರರಲ್ಲ, ಮಗು. ಇಡೀ ಜಗತ್ತು ನಿನ್ನದು."

ಜಗತ್ತಿನ ಶ್ರೇಷ್ಠ ಚಿಂತಕರಲ್ಲಿ ಒಬ್ಬರಾದ ಟೆಲ್‌ಹಾರ್ಡ್ ಡ ಚಾರ್ಡಿನ್ (Teilhard de Chardin) ಅವರ ಹೇಳಿಕೆಯೊಂದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು: "ದೇಶಗಳ ಯುಗ ಈಗ ಮುಗಿದಂತಾಗಿದೆ. ಮಾನವರು ತಮ್ಮ ಹಳೆಯ ಪೂರ್ವಾಗ್ರಹಗಳನ್ನು ತ್ಯಜಿಸಿ, ಒಬ್ಬ ವ್ಯಕ್ತಿಯಂತೆ ಮುಂದೆ ಬಂದು ಭೂಮಿಯನ್ನು ಕಟ್ಟುವ (ರಾಷ್ಟ್ರವನ್ನು ಕಟ್ಟುವುದಲ್ಲ) ಕಾಲ ಈಗ ಸನ್ನಿಹಿತವಾಗಿದೆ."

ಎಲ್ಲ ಸೀಮಿತ ವಲಯಗಳಿಂದ ಮಾನವನು ಹೊರಬಂದಾಗ ಅವನು ವಿಶ್ವಮಾನವನಾಗುತ್ತಾನೆ. ಆಗ ಅವನು ಅನುಸರಿಸುವ ಧರ್ಮವೂ ವಿಶ್ವಧರ್ಮವಾಗುತ್ತದೆ. ಅಂದರೆ ಅವನು ಸಂಸ್ಥಾಬದ್ಧ ಮತೀಯ ಧರ್ಮದಿಂದ ಹೊರಬರುತ್ತಾನೆ. ಅವನು ಕ್ರೈಸ್ತನಾಗಲಿ ಮುಸಲ್ಮಾನನಾಗಲಿ ಅಥವಾ ಹಿಂದುವಾಗಲಿ ಆಗಿರದೆ, ಕೇವಲ ಆಧ್ಯಾತ್ಮಿಕ ವ್ಯಕ್ತಿಯಾಗಿರುತ್ತಾನೆ. ಅಮೇರಿಕದಲ್ಲಿ ಅನೇಕರು ಸಂಸ್ಥಾಬದ್ಧ ಧರ್ಮದಿಂದ ಬೇಸತ್ತು ಅದರ ಪರಿಧಿಯಿಂದ ಹೊರಗೆ ಆಧ್ಯಾತ್ಮಿಕತೆಯನ್ನು ಅನ್ವೇಷಿಸುತ್ತಿರುವುದು ಭವಿಷ್ಯ ಧರ್ಮದ ಮುನ್ಸೂಚನೆಯಾಗಿರಬಹುದು. ಸ್ವಾಮಿ ವಿವೇಕಾನಂದರು ಈ ಭವಿಷ್ಯ ಧರ್ಮವನ್ನು ಪ್ರತಿನಿಧಿಸುತ್ತಾರೆ. ಅವರು ಹೇಳುತ್ತಾರೆ: "ವೇದವಾಗಲಿ, ಬೈಬಲ್ ಆಗಲಿ, ಕೊರಾನ್ ಆಗಲಿ ಇಲ್ಲದ ಸ್ಥಳಕ್ಕೆ ಮಾನವಕೋಟಿಯನ್ನು ಕೊಂಡೊಯ್ಯಬೇಕು. ಆದರೂ ಕೂಡ ವೇದ, ಬೈಬಲ್ ಮತ್ತು ಕೊರಾನುಗಳ ಸಾಮರಸ್ಯದಿಂದ ಇದನ್ನು ಸಾಧಿಸಬೇಕಾಗಿದೆ. ವಿಭಿನ್ನ ಧರ್ಮಗಳು ಏಕವಾದ ಒಂದೇ ಧರ್ಮದ ಅನಂತ ಅಭಿವ್ಯಕ್ತಿಗಳೆಂಬುದನ್ನು ಕಲಿಸಬೇಕು. ಇದರಿಂದ ಪ್ರತಿಯೊಬ್ಬನೂ ತನಗೆ ಯಾವುದು ಉತ್ತಮ ಮಾರ್ಗವೊ ಅದನ್ನು ಆರಿಸಿಕೊಳ್ಳಬಹುದು" (ಕೃತಿಶ್ರೇಣಿ, ೫.೧೦೮).

ಈ ರೀತಿ ಧರ್ಮವು ವೈಯಕ್ತಿಕವಾದಾಗ ಯಾವುದೇ ಮತೀಯ ಕಲಹಕ್ಕೂ ಅವಕಾಶವಿರುವುದಿಲ್ಲ, ಆಯಾಯ ಧರ್ಮೀಯರ ಸಂಖ್ಯಾಭಿವೃದ್ಧಿಯ ಪೈಪೋಟಿ ಇರುವುದಿಲ್ಲ, ಗುಡಿ ಮಸೀದಿ ಚರ್ಚುಗಳನ್ನು ಹೆಚ್ಚಳಗೊಳಿಸುವ, ಒಬ್ಬರು ಮತ್ತೊಬ್ಬರದನ್ನು ಒಡೆದುಹಾಕುವ ಹೋರಾಟವಿರುವುದಿಲ್ಲ. ಇಂಥ ಭವಿಷ್ಯಧರ್ಮದ ಮೂರ್ತರೂಪವಾಗಿದ್ದರು ಸ್ವಾಮಿ ವಿವೇಕಾನಂದರು. ಶ್ರೀರಾಮಕೃಷ್ಣರು ಬೇರೆ ಬೇರೆ ಧರ್ಮ ಸಾಧನೆಗಳನ್ನು ಮಾಡಿದ್ದರೂ ತಮ್ಮ ಜೀವನ, ಉಪದೇಶ ಮತ್ತು ರೀತಿನೀತಿಗಳಲ್ಲಿ ಅವರು ಹೆಚ್ಚು ಹಿಂದುವಾಗಿಯೇ ಇದ್ದರು. ಶ್ರೀಮಾತೆಯವರೂ ಸಾಂಪ್ರದಾಯಿಕ ಹಿಂದೂ ಮಹಿಳೆಯಂತೆಯೇ ಜೀವನ ನಡೆಸಿದರು. ಆದರೆ ಸ್ವಾಮಿ ವಿವೇಕಾನಂದರ ಜೀವನ-ಸಂದೇಶ ಹಿಂದೂ ಪರಿಧಿಯನ್ನು ಮೀರಿಹೋಗುತ್ತದೆ. ಭವಿಷ್ಯ ಧರ್ಮದ ಹರಿಕಾರರಾಗಿ ಅವರು ಹೇಳುತ್ತಾರೆ: "ಧರ್ಮದ ಶಿಶುವಿಹಾರಗಳನ್ನೆಲ್ಲ ತ್ಯಜಿಸುವ ಮಹಾನ್ ವ್ಯಕ್ತಿಗಳು ಉದಿಸುವ ಕ್ಷಣವೊಂದು ಬರುತ್ತದೆ. ಆತ್ಮನನ್ನು ಆತ್ಮದಿಂದ ಪೂಜಿಸುವ ಸತ್ಯವಾದ ಧರ್ಮವನ್ನು ಅವರು ಸ್ಪಷ್ಟವೂ ಶಕ್ತಿಯುತವೂ ಆದುದನ್ನಾಗಿ ಮಾಡುತ್ತಾರೆ" (ಕೃತಿಶ್ರೇಣಿ, ೬.೨೩೭).ಇನ್ನೊಂದು ವೈಶಿಷ್ಟ್ಯವೇನೆಂದರೆ ಸ್ವಾಮಿ ವಿವೇಕಾನಂದರು ನಾಸ್ತಿಕರಿಗೂ ಧರ್ಮದ ಬಾಗಿಲನ್ನು ತೆರೆದುದು. ಅವರು ಪ್ರತಿಪಾದಿಸಿದ ಧರ್ಮದಿಂದ ಯಾರನ್ನೂ ಹೊರತುಪಡಿಸುವಂತಿಲ್ಲ. ಅವರು ಹೇಳುತ್ತಾರೆ: "ನಾವು ಯಾರನ್ನೂ ನಿರಾಕರಿಸುವುದಿಲ್ಲ. ಆಸ್ತಿಕನಾಗಲಿ, ವಿಶ್ವದೇವೈಕ್ಯವಾದಿಯಾಗಲಿ, ಅದ್ವೈತಿಯಾಗಲಿ, ಬಹುದೇವತಾವಾದಿಯಾಗಲಿ, ಅಜ್ಞೇಯತಾವಾದಿಯಾಗಲಿ ಅಥವಾ ನಾಸ್ತಿಕನೇ ಆಗಲಿ ಎಲ್ಲರಿಗೂ ಇಲ್ಲಿ ಅವಕಾಶವುಂಟು. ಇರಬೇಕಾದ ಒಂದೇ ಒಂದು ಅರ್ಹತೆಯೆಂದರೆ ವ್ಯಕ್ತಿಯ ಮನೋಭಾವ ಅತ್ಯಂತ ವಿಶಾಲವೂ ಆಳವೂ ಆಗಿರಬೇಕು."

ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ವೇದಾಂತವು ಎಲ್ಲ ಮತೀಯ ಕಲಹಗಳಿಂದ ಮುಕ್ತವಾದ, ಮಾನವ ಆಶೋತ್ತರಗಳೆಲ್ಲವನ್ನೂ ಒಳಗೊಳ್ಳುವ ಮತ್ತು ವಿಶ್ವವ್ಯಾಪಿಯಾಗಿ ಎಲ್ಲರೂ ಅನುಸರಿಸಬಹುದಾದ ಧರ್ಮವಾಗಿತ್ತು. ಅವರ ವೇದಾಂತವನ್ನು ಕುರಿತಾಗಿ ಮೇರಿ ಲೂಯಿಸ್ ಬರ್ಕ್ ಹೀಗೆ ಹೇಳುತ್ತಾರೆ: "ಪ್ರಪಂಚದ ಎಲ್ಲ ನಂಬಿಕೆಗಳನ್ನೂ ಒಳಗೊಳ್ಳುವ, ಮಾನವನ ಉದಾತ್ತ ಪ್ರಯತ್ನಗಳೆಲ್ಲವನ್ನೂ ತನ್ನ ಪರಿಧಿಯೊಳಗೆ ಸೇರಿಸಿಕೊಳ್ಳುವ, ಆಧ್ಯಾತ್ಮಿಕತೆ ಮತ್ತು ಲೌಕಿಕ ಪ್ರಗತಿಯನ್ನೂ ಭೌತವಿಜ್ಞಾನ ಮತ್ತು ಆತ್ಮವಿಜ್ಞಾನವನ್ನೂ ಕರ್ಮ ಮತ್ತು ಧ್ಯಾನವನ್ನೂ ಮಾನವ ಸೇವೆ ಮತ್ತು ಭಗವತ್ತಲ್ಲೀನತೆಯನ್ನೂ ಸಾಮರಸ್ಯಗೊಳಿಸುವ ತತ್ತ್ವಶಾಸ್ತ್ರ ಮತ್ತು ಧರ್ಮವಾಗಿ ವೇದಾಂತವನ್ನು ಹಿಂದೆ ಯಾರೂ ಇಷ್ಟೊಂದು ವಿಸ್ತಾರಗೊಳಿಸಿರಲಿಲ್ಲ."

ಹೀಗೆ ಸ್ವಾಮಿ ವಿವೇಕಾನಂದರು ಧರ್ಮವನ್ನು ಯಾವುದೇ ಮತಕ್ಕೆ ಸೀಮಿತಗೊಳಿಸದೆ ಮತ್ತು ಯಾವುದೇ ಕೆಲವು ಆಚರಣೆಗಳಿಗೆ ಅಥವಾ ಸಾಧನೆಗಳಿಗೆ ಸೀಮಿತಗೊಳಿಸದೆ ಅದು ಸಾರ್ವಕಾಲಿಕವೂ ಸಾರ್ವತ್ರಿಕವೂ ಸಾರ್ವಜನೀಯವೂ ಆಗುವಂತೆ ಮಾಡಿ, ಇದು ಭವಿಷ್ಯ ಧರ್ಮವಾಗಬೇಕೆಂದು ಆಶಿಸಿದ್ದರು. ಆದ್ದರಿಂದ ಸ್ವಾಮಿ ವಿವೇಕಾನಂದರನ್ನು ಭವಿಷ್ಯಧರ್ಮದ ಪ್ರತಿನಿಧಿ ಎಂದು ನಾವು ಹೇಳಬಹುದು.

(ಮುಂದುವರಿಯುತ್ತದೆ.)